MYSORE LEGISLATIVE ASSEMBLY

NINETIETH DAY.

Friday, 20th December 1963.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Amount earmarked for the year 1962-63 under Minor Irrigation Project

*Q.—1087. **Sri M. C. BASAPPA** (Chamarajanagar).—

Will the Government be pleased to state:—

(*a*) the amount earmarked for the year 1962-63 under Minor Irrigation project;

(*b*) the amount spent for the above Project at the close of the said year;

(*c*) whether any amount had lapsed?

*A.—**Sri ALUR HANUMANTHAPPA** (Deputy Minister for Minor Irrigation).—

(*a*) Rs. 238 lakhs for Minor Irrigation works (P.W.D. Sector).
(*b*) Rs. 251.04 lakhs.
(*c*) Nil.

ಶ್ರೀ ಎಂ. ಸಿ. ಬಸಪ್ಪ.—1962-63ನೆಯ ಸಾಲಿನಲ್ಲಿ ಸಣ್ಣ ನೀರಾವರಿ ಯೋಜನೆಗಳಿಗೆ ಕೇಂದ್ರ ದಿಂದ ನಮ್ಮ ಸಂಸ್ಥಾನಕ್ಕೆ ದೊರೆತ ಹಣವೆಷ್ಟು, ಸ್ವಾಮಿ?

†ಶ್ರೀ ಆಲೂರು ಹನುಮಂತಪ್ಪ.—ನಮಗೆ ಪ್ಲಾನಿನಲ್ಲಿ 138 ಲಕ್ಷ ರೂಪಾಯಿಇತ್ತು. ಇಂಡಿಯಾ ಸರ್ಕಾರದವರು 100 ಲಕ್ಷ ರೂಪಾಯಿ ಕೊಟ್ಟರು. ಒಟ್ಟು 238 ಲಕ್ಷ ರೂಪಾಯಿ ಹೋದ ವರ್ಷದ ಪ್ರಾವಿಷನ್.

ಶ್ರೀ ಎಂ. ಸಿ. ಬಸಪ್ಪ.—ಈ ಹಣದಲ್ಲಿ ಹೊಸದಾಗಿ ಬಾವಿಗಳನ್ನು ತೆಗೆಯತಕ್ಕದ್ದು ಮತ್ತು ಬಾವಿಗಳಿಗೆ ನೀರಾವರಿ ಪಂಪುಗಳನ್ನು ಜೋಡಿಸತಕ್ಕದ್ದು ಸೇರಿಸಿದೆಯೇ, ಸ್ವಾಮಿ?

†Indicates that the remarks or speeches have not been revised by the member concerned.

ಶ್ರೀ ಆಲೂರು ಹನುಮಂತಪ್ಪ.—ಸೇರಿಲ್ಲ. ಈ ಹಣವಿರುವುದು P.W.D. ಕೆಲಸಗಳಿಗೆ ಮಾತ್ರ.

ಶ್ರೀ ಎಂ. ಸಿ ಬನಪ್ಪ.—ಹಾಗಾದರೆ ಈ ಭಾವಿಗಳಿಗೆ ಪಂಪುಸೆಟ್ಟುಗಳಿಗಾಗಿ ಖರ್ಚುಮಾಡಿರುವ ಹಣವೆಷ್ಟು, ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.—ಆ ವಿಚಾರ ನನ್ನಲ್ಲಿಲ್ಲ. ಬೇರೆ ಪ್ರಶ್ನೆ ಹಾಕಿದರೆ ತಿಳಿಸಬಹುದು.

ಶ್ರೀ ಗಂಗಾಧರ ನವೋಶಿ.—251.04 ಲಕ್ಷ ರೂಪಾಯಿಗಳಲ್ಲಿ ಹೈದರಾಬಾದು ಕರ್ನಾಟಕ ದಲ್ಲಿ ಎಷ್ಟು ಖರ್ಚಾಗಿದೆ, ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.—ಅದು ಬಹಳ ವಿವರವಾಗುತ್ತದೆ. ಎಲ್ಲ ವಿವರಗಳೂ ಕೂಡ ನನ್ನ ಹತ್ತಿರ ಈಗ ಇಲ್ಲ.

Mr. SPEAKER.—If it is a long list, it can be placed on the Table of the House. I don't think it is confidential.

Sri ALUR HANUMANTHAPPA.—It is not confidential.

Mr. SPEAKER.—I will have it placed on the Table of the House.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಹಣವನ್ನು ತಾವು ದೇಶದ್ಯಾಂತ ಎಲ್ಲರಿಗೂ ಅದರ ನವಲತ್ತು ಸಿಕ್ಕುವ ಹಾಗೆ ಖರ್ಚು ಮಾಡಿದ್ದೀರೋ ಅಥವಾ ಯಾವುದಾದರೂ ಒಂದು ಭಾಗಕ್ಕೆ ಹೆಚ್ಚು ಖರ್ಚು ಮಾಡಿದ್ದೀರೋ, ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.—ಎಲ್ಲ ಸರ್ಕಲ್‌ಗಳಲ್ಲಿಯೂ, ಡಿವಿಜನ್‌ಗಳಲ್ಲಿಯೂ, ಎಲ್ಲ ಜಿಲ್ಲೆ ಗಳಲ್ಲಿಯೂ ಖರ್ಚು ಮಾಡುವ ಹಾಗೆ ವ್ಯವಸ್ಥೆ ಮಾಡಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಉಪಮಂತ್ರಿಗಳು ಈ ನಭೆಯಲ್ಲಿ ಆಶ್ವಾಸ ಕೊಡಿಸಿದ ಹಾಗೆ ಅಭಾವ ಪೀಡಿತ ಪ್ರದೇಶಗಳಲ್ಲಿ, ಮಳೆ ಕಡಿಮೆ ಬೀಳುವ ಪ್ರದೇಶಗಳಲ್ಲಿ ನಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಿಗೆ ಪ್ರಾಶಸ್ತ್ಯ ಕೊಡಬೇಕೆಂದು ಹೇಳಿದ್ದು, ಆ ರೀತಿ ಮಳೆ ಕಡಮೆ ಬೀಳುವ ಪ್ರದೇಶಗಳಲ್ಲಿ ಎಂದರೆ ಕೋಲಾರ, ಬಿಜಾಪುರ, ತುಮಕೂರು, ಚಿತ್ರದುರ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಎಷ್ಟು ಹಣ ಖರ್ಚಾಗಿದೆ?

ಶ್ರೀ ಆಲೂರು ಹನುಮಂತಪ್ಪ.—ಒಂದೊಂದನ್ನು ವಿವರವಾಗಿ ಕೇಳಿದರೆ ಆ ವಿವರಗಳನ್ನು ಓದಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಬೇಕಾದರೆ ಇನ್ನೊಂದು ಪ್ರಶ್ನೆ ಹಾಕಿದರೆ ವಿವರಗಳನ್ನು ಓದಿಸುತ್ತೇನೆ.

Mr. SPEAKER.—The Hon'ble Minister may kindly furnish that information later in writing.

ಶ್ರೀ ಸಿದ್ದಯ್ಯ ಕಾಶೀಮಠ್.—ಇದರೊಳಗೆ 238 ಲಕ್ಷ ರೂಪಾಯಿಗಳನ್ನು earmark ಮಾಡಿ ದ್ದೀರಿ. ಈ ಹಣವೆಲ್ಲವನ್ನೂ P.W.D. ಇಲಾಖೆಯಿಂದಲೇ ಕೊಟ್ಟಿದ್ದೀರೋ ಅಥವಾ ಬೇರೆ ಕಡೆಯಿಂದ ನೀರಾವರಿ ಕೆಲಸಕ್ಕೆ ಮಂಜೂರು ಮಾಡಿದ್ದೀರೋ?

ಶ್ರೀ ಆಲೂರು ಹನುಮಂತಪ್ಪ.—ಮೈನರ್ ಇರಿಗೇಷನ್ನಿಗೆ ಹಣ ಬರತಕ್ಕದ್ದು P W.D. ಕೆಲಸ ಗಳಿಗೆ ರೆಸ್ಟೊರೇಷನ್, ಪಿಕಪ್ಪುಗಳು, ಆಣೆಕಟ್ಟುಗಳು, ಬಂಡಾರಗಳು ಇಂಥದಕ್ಕೆಲ್ಲ ಖರ್ಚು ಮಾಡು ತ್ತೇವೆ. ಪಂಪುಸೆಟ್ಟುಗಳಿಗೆ ಖರ್ಚು ಮಾಡತಕ್ಕ ಹಣವೂ ಸಹ ಇರುತ್ತದೆ. ನೀರಾವರಿ ಬಾವಿಗಳಿಗೆ ರೆವಿನ್ಯೂ ಅಧಿಕಾರಿಗಳ ಮುಖೇನ ಮತ್ತು ತಾಲ್ಲೂಕು ಬೋರ್ಡ್ ಮುಖೇನ ಖರ್ಚು ಮಾಡಲಾಗುತ್ತದೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಕೆಲಸಗಳಿಗೆ ಸರ್ವೆ ಮತ್ತು ಎಸ್ಟಿಮೇಟ್ ಆಗಿದೆ ಮತ್ತು ಎಷ್ಟು ಕೆರೆಗಳನ್ನು ಮಂಜೂರು ಮಾಡಿದ್ದೀರಿ?

ಶ್ರೀ ಆಲೂರು ಹನುಮಂತಪ್ಪ.—ಸ್ಕೇರ್ಸಿಟಿ ವರ್ಕ್ಸ್‌ನಲ್ಲಿ ಮಂಜೂರಾಗಿರುವುದು 15 ಕೆಲಸಗಳು, ಇದಕ್ಕೆ 15 ಲಕ್ಷ ರೂಪಾಯಿಗಳ ಎಸ್ಟಿಮೇಟ್ ತಯಾರಾಗಿರುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಇತ್ತೀಚೆಗೆ ಅನೇಕ ಕೆಲಸಗಳನ್ನು ಮಂಜೂರು ಮಾಡಿದ್ದೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಎಷ್ಟು ಮೊತ್ತದ ಕೆಲಸವನ್ನು ಮಾಡಿ ಪೂರೈಸಿದರೆ ಮೈನರ್ ಇರಿಗೇಷನ್ ವರ್ಕ್ಸ್ ಆಗುತ್ತದೆ, ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.—ಒಂದು ಸಾವಿರ ಎಕರೆವರೆಗೆ ಮತ್ತು ಹತ್ತು ಲಕ್ಷ ರೂಪಾಯಿ ವರೆಗೆ ಒಂದು ಕೆಲಸವನ್ನು ಮಾಡುವುದಾದರೆ ಅದು ನಣ್ಣ ನೀರಾವರಿ ಯೋಜನೆಯಲ್ಲಿ ಬರುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಣ್ಣ ನೀರಾವರಿ ಯೋಜನೆಯಲ್ಲಿ ಬಾವಿಗಳ ಕೆಳಗೆ ಎಷ್ಟು ಎಕರೆ ಹೊಸ ಆಚ್ಚುಕಟ್ಟು ಮಾಡಿದ್ದೀರಿ ಮತ್ತು ಕೆರೆಗಳಿಂದ ಎಷ್ಟು ಹೊಸ ಆಚ್ಚುಕಟ್ಟು ವ್ಯವಸಾಯಕ್ಕೆ ಬಂದಿದೆ, ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.-ರಾಜ್ಯದಲ್ಲಿ ಒಟ್ಟು ಎಷ್ಟು ಕೆರೆಗಳಿವೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತು. ಇದರಿಂದ 11 ಲಕ್ಷ ಎಕರೆ ನೀರಾವರಿಯಲ್ಲಿದೆ. ಹೊಸದಾಗಿ ತೆಗೆದುಕೊಂಡ ನೀರಾವರಿ ಯೋಜನೆಗಳಿಂದ ಎಷ್ಟು ಅಚ್ಚುಕಟ್ಟಾಗುತ್ತದೆ ಎಂದರೆ ಹೇಳಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹೊಸದಾಗಿ ತಯಾರಾಗಿರುವ ಬಾವಿ ನೀರಾವರಿಯಿಂದ ಮತ್ತು ಕೆರೆ ನೀರಾವರಿಯಿಂದ ಎಷ್ಟು ಅಚ್ಚುಕಟ್ಟು ಮಾಡಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಒಂದು ಪ್ರೊಜೆಕ್ಟಿನ ಕೆಲಸ ತೆಗೆದುಕೊಂಡ ಮೇಲೆ ಆ ಕೆಲಸ ಮುಗಿಯಬೇಕಾದರೆ ಒಂದೆರಡು ವರ್ಷ ಕಾಲ ಬೇಕಾಗುತ್ತದೆ. ಸ್ವಲ್ಪ ವಿಳಂಬವಾಗಬಹುದು. ಆದರೂ ಯಾವ ಪ್ರದೇಶಕ್ಕೆ ಅನುಕೂಲವಾಗುತ್ತದೆಯೋ ಅದರ ಅಂಕಿಅಂಶಗಳು ಇರುತ್ತವೆ. ಹೋದ ವರ್ಷ 13,176 ಎಕರೆ ಹೊಸ ಅಚ್ಚುಕಟ್ಟು ಆಗಿದೆ, ಇದಲ್ಲದೆ 28,420 ಎಕರೆಗಳಿಗೆ ಅಮ್ಯುಡ್ ವಾಟರ್ ಸಪ್ಲೈ ಮಾಡಿದೆ. ಇದರಲ್ಲಿ ರೆಸ್ಟೋರೇಷನ್ ಸಹ ಸೇರಿದೆ.

ಶ್ರೀ ಇ. ನಾರಾಯಣಗೌಡ.—ರಾಜ್ಯದಲ್ಲಿರತಕ್ಕ ಸಣ್ಣ ನೀರಾವರಿ ಯೋಜನೆಗಳು ಯಾವ ಮಟ್ಟದಲ್ಲಿವೆ ? ಹಣ ಎಷ್ಟು ಬೇಕು ? ಎಷ್ಟು ಕಾಲಬೇಕು ?

ಶ್ರೀ ಆಲೂರು ಹನುಮಂತಪ್ಪ.—ಹಣದ ಪರಿಮಿತಿಯ ಬಗ್ಗೆ ಅನೇಕ ಸಲ ಹೇಳಿದೆ. ಈಗ ಎಸ್ಟಿಮೇಟುಗಳು ತಯಾರಾಗಿವೆ. ಹೆಚ್ಚು ಹಣ ಕೊಡಬೇಕೆಂದು ಕೇಂದ್ರ ಸರಕಾರವನ್ನು ಕೇಳುತ್ತಿದ್ದೇವೆ. ಸಹಾನುಭೂತಿಯಿಂದ ಸಹಾಯ ಮಾಡುತ್ತಿದ್ದಾರೆ. ಎರಡು ಕೋಟಿ ರೂಪಾಯಿ ಕೇಳುತ್ತಿದ್ದೇವೆ.

ಶ್ರೀ ಇ. ನಾರಾಯಣಗೌಡ.—ಕಡಮೆ ಅಚ್ಚುಕಟ್ಟು ಇರತಕ್ಕಂಥ ಕಡೆ ಕೆಲಸ ಜಾಗ್ರತೆ ನಡೆಯುತ್ತಿಲ್ಲ. ಅದಷ್ಟು ಜಾಗ್ರತೆ ಕೆಲಸ ನಡೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಪ್ರಯತ್ನ ಮಾಡುತ್ತೇವೆ.

Sri SANJEEVANATH AIKALA.—What are the urgent immediate works you are required to carry out so far as minor irrigation works are concerned in the district or districts which you select for the intensive cultivation under the package programme ?

Sri ALUR HANUMANTHAPPA.—All irrigation works—pickups, tanks, lift irrigation schemes and such other important irrigation facilities that are necessary for that area.

Sri SANJEEVANATH AIKALA.—What is the amount allotted for the purpose ?

Sri ALUR HANUMANTHAPPA.—It depends upon the requirement. If the intensive scheme is there, the schemes will be ready. We are preparing a master plan. We have collected data from each and every district as per the wishes of this Hon'ble House. We are preparing plans for the entire State.

Sri SANJEEVANATH AIKALA.—What is the amount you propose to allot for the district; you propose to take up for the next year ?

Mr. SPEAKER.—It was said previously that something included in the Budget for the next year should not be disclosed in advance. Any way I allow the question.

Sri ALUR HANUMANTHAPPA.—It is not yet finalised, Sir.

ಶ್ರೀ ಎಂ. ಸಿ. ಬಸಪ್ಪ.—ಕೇಂದ್ರ ಸರಕಾರದಿಂದ ದೊರಕುವ ಸಹಾಯ ಎಷ್ಟಿದೆ ?

Sri ALUR HANUMANTHAPPA.—Hundred lakhs additional grant we got.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಸ್ಕೀಂ ದೇಶದಾದ್ಯಂತ ಜಾರಿಗೆ ತರಲು ಎಷ್ಟು ಹಣ ಖರ್ಚಾಗ ಬಹುದು ? ಈ ತಿಳಿಸಿರುವ ಹಣದಲ್ಲಿ ಇದು ಸೇರ್ಪಡೆಯಾಗಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ಡಿವಿಜನ್ನಿನ ಕೆಲವು ನದಿ ಪ್ರದೇಶದಲ್ಲಿ ಈ ಸ್ಕೀಂ ಯಶಸ್ವಿಯಾಗಿದೆ ಎಂದು ಕಂಡು ಬಂದ ಮೇಲೆ 68 ಲಕ್ಷ ರೂಪಾಯಿ ಯೋಜನೆ ಮಾಡಿ ಕೇಂದ್ರ ಸರಕಾರಕ್ಕೆ ಕಳಿಸಿದೆ. ಪ್ರದೇಶದಾದ್ಯಂತ ಯಾವ ಯಾವ ಭಾಗದಲ್ಲಿ ಯೋಜನೆ ತೆಗೆದುಕೊಳ್ಳಬೇಕೆಂಬ ಬಗ್ಗೆ ಪರಿಶೀಲನೆ ಮಾಡಲಾಗಿದೆ. ಯೋಜನೆ ಸ್ಯಾಂಕ್ಷನ್ ಆದಮೇಲೆ ಕಾರ್ಯಗತ ಮಾಡಲಾಗುವುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಂಧ್ರ, ಕೇರಳ ಮದ್ರಾಸ್ ರಾಜ್ಯದ ಮಟ್ಟಕ್ಕೆ ಸಣ್ಣ ನೀರಾವರಿ ಯೋಜನೆಯನ್ನು ಕಾರ್ಯಗತಗೊಳಿಸಲು ಇನ್ನೂ ಎಷ್ಟು ಅವಧಿ ಬೇಕು ?

ಶ್ರೀ ಆಲೂರು ಹನುಮಂತಪ್ಪ.—ಎಸ್ಟಿಮೇಟು ರೆಡಿ ಮಾಡಿಕೊಂಡಿದ್ದೇವೆ. ಹಣ ಮಂಜೂರು ಮಾಡಿದ ಕೂಡಲೇ ಕೆಲಸ ಕಾರ್ಯಗತ ಮಾಡಲಾಗುವುದು. ಹೆಚ್ಚು ಹಣ ಕೊಡಿ ಎಂದು ಕೇಂದ್ರ ಸರಕಾರವನ್ನು ಸಹ ಕೇಳುತ್ತಿದ್ದೇವೆ.

Sri SIDDIAH KASIMATH.—What is the amount spent for Lift Irrigation during 1962-63 ?

Sri ALUR HANUMANTHAPPA.—That information is not with me.

ಶ್ರೀ ಇ. ನಾರಾಯಣ ಗೌಡ.—ಈ ಯೋಜನೆಯಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿ ಸರ್‌ಪ್ಲಸ್ ಆಗಿದೆ, ಕೆಲಸವಿಲ್ಲವೆಂದು ಕಾಣುತ್ತದೆ. ತಾಲ್ಲೂಕು ಬೋರ್ಡುಗಳಿಗೆ ಕೆಲಸ ವಹಿಸಿಕೊಟ್ಟ ಮೇಲೆ ಕೆಲಸ ನಿಂತು ಹೋಗಿದೆ. ಇದು ಗಮನಕ್ಕೆ ಬಂದಿದೆಯೇ ?

Mr. SPEAKER.—It does not arise. Any way it may be answered.

ಶ್ರೀ ಆಲೂರು ಹನುಮಂತಪ್ಪ.—ಸಿಬ್ಬಂದಿ ಸರ್‌ಪ್ಲಸ್ ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಒಂದು ಸಬ್ ಡಿವಿಜನ್ನಿನಲ್ಲಿರುವ ಸಿಬ್ಬಂದಿ ನಾಲ್ಕೈದು ಹೋಬಳಿ ನೋಡಿಕೊಳ್ಳಬೇಕಾಗುತ್ತದೆ. ಹೊಸ ಕೆರೆಗಳ ನಿರ್ಮಾಣ ಕೆಲಸ ಇರುತ್ತದೆ. ಆದ್ದರಿಂದ ಜಾಸ್ತಿ ಕೆಲಸ ಇದೆ ಎಂದು ಮನವರಿಕೆಯಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮದ್ರಾಸ್, ಆಂಧ್ರ, ಕೇರಳ ರಾಜ್ಯಗಳು ಕೇಂದ್ರದಿಂದ ಹಣ ತೆಗೆದುಕೊಂಡು ಕೆಲಸ ಪ್ರಾರಂಭಿಸಿವೆ. ಕೇಂದ್ರ ಸರಕಾರ ನಮ್ಮ ರಾಜ್ಯಕ್ಕೆ ಇನ್ನೂ ಹಣ ಏಕೆ ಕೊಟ್ಟಿಲ್ಲ ?

ಶ್ರೀ ಆಲೂರು ಹನುಮಂತಪ್ಪ.—ನಮಗೂ ಹಣ ಬರುತ್ತದೆ. ಇನ್ನೂ ಹೆಚ್ಚಿಗೆ ಹಣ ಕೊಡಿ ಎಂದು ಅವರನ್ನು ಕೇಳುತ್ತಿದ್ದೇವೆ.

Steps taken to get adequate transport facilities for the State.

*Q.—1139. Sri GANGADHAR NAMOSHI (Gulbarga).—

Will the Government be pleased to state.—

(*a*) whether the Minister for Industries has stated that considerable amount of trade is diverted to neighbouring State on account of lack of transport facilities, etc., in the State ;

(*b*) whether any estimate has been made by the Government in this regard ;

(*c*) the steps they have taken to get adequate transport facilities for the State (such as broad guage, mileage increment, new rail link, etc.) ?

A.—Sri K. MALLAPPA (Minister for Industries and Commerce).—

(*a*) Yes.

(*b*) No.

(*c*) Every opportunity is being taken to press on the Central Government the need for adequate transport and port facilities for the State.

ಶ್ರೀ ಗಂಗಾಧರ ನಾಮೋಷಿ.—(ಇ)ಗೆ ಉತ್ತರವಾಗಿ ಕೇಂದ್ರ ಸರಕಾರವನ್ನು ನಮಯ ದೊರೆಕಿದಾಗಲೆಲ್ಲಾ ಒತ್ತಾಯ ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ, ನಿಮ್ಮ ಒತ್ತಾಯಕ್ಕೆ ಕೇಂದ್ರ ಸರಕಾರದವರೇನಾದರೂ ಮಾನ್ಯತೆ ಕೊಟ್ಟಿದ್ದಾರೆಯೇ ? ಅದಕ್ಕೇನಾದರೂ ಮಾನ್ಯತೆ ಉಂಟೇ ? ಇದ್ದರೆ ಇದುವರೆಗೂ ಯಾವ ಯಾವ ಕೇಳಿಕೆಯ ಮೇಲೆ ಅವರು ಮಾನ್ಯತೆ ಕೊಟ್ಟಿದ್ದಾರೆ ?